(*b*) the particulars furnished by Sri Shirali in regard to the irregularities committed in the implementation of Alloy and Special Steel Plant ;

(*c*) whether the Management has taken action according to the report of Sri Shirali and if so, the expenditure incurred ?

SRI S. M. KRISHNA (Minister for Industries and Parliamentary Affairs.—

(*a*) In July, 1971.

(*b*) Shri Shirali did not go into this question.

(*c*) The recommendations made by Shri A. R. Shirali in regard to rectification of procedures, providing in built checks and controls have been implemented with sufficient re-organisation within the Company. No extra expenditure was incurred for rectification of procedure and for providing in built checks etc.

Other recommendations/ommissions pointed out in Shri Shirali's report on which no action had been taken to fix responsibility were referred to Shri R. C. Dutt for further enquiry. Shri Dutt's Report covers these items.

REPORT OF DUTT COMMITTEE ON M. I. S. L.

210 SRI HANJI SHIVANNA (Tarikere) —Will the Minister for Industries and Parliamentary Affairs be pleased to state :—

(*a*) when was the Dutt Committee appointed in regard to M. I. S. L. ;

(*b*) when he submitted the report ;

(*c*) the action taken by the Government so far on the report ;

(*d*) whether the Government has appointed a Special Officer or a Special Committee to go deeply into the irregularities committed by the Company as stated by the Minister for Industries in the Assembly ;

(*e*) if not, when the Government is going to appoint the Special Officer or the Special Committee ;

(*f*) the expenditure incurred by the Company in respect of Dutt Committee ;

(*g*) the suggestions made in the Dutt Report in regard to recruitment and promotions etc ;

(*h*) whether it is not a fact that the suggestions given by the Administrative Staff College, Hyderabad and the Dutt Committee in regard to recruitment and promotions are more or less the same ;

(SRI HANJI SHIVANNA)

(*i*) whether it is not a fact that Memo No. DR 1273 dated 28-10-1972 issued by the Company in regard to promotions are more or less in accordance with Dutt Report and the Report of Administrative Staff College, Hyderabad ;

(*j*) whether it has come to the notice of the Government that inspite of all this present management is not only disregarding the suggestions made by the experts the management is re-thinking about the memo issued by the management itself in regard to recruitment and promotions ?

SRI S. M. KRISHNA (Minister for Industries and Parliamentary Affairs.—

(*a*) October, 1972.

(*b*) June, 1973.

(*c*) Action has been taken on the recommendations calling for implementation at Company level and matters entailing policy decision are under consideration of the Board of Directors and the State Government.

(*d*) Yes. A special officer has been appointed to pursue Dutt's Report.

(*e*) Does not arise in view of the reply to clause (*d*).

(*f*) Rs. 63.693.

(*g*) The recommendations are contained in Chapter XXII of the report.

(*h*) Yes, to some extent.

(*i*) Yes.

(*j*) No.

ಶ್ರೀ ಹಂಜಿ ಶಿವಣ್ಣ.—ಸ್ವಾಮಿ ೧೩ನೇ ಪ್ರಶ್ನೆಯ (ಸಿ) ಉಪ-ಪ್ರಶ್ನೆಗೆ ಉತ್ತರ ಕೊಡುತ್ತಾ ಸಂಚಾಲಕ ಮಂಡಲಿಯವರ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಇದುವರೆಗೂ ಕೂಡ ಆದು ಕಾರ್ಯಗತ ಮಾಡಿಲ್ಲವೆಂದು ಹೇಳಬೇಕಾಗುತ್ತದೆ ಈ ಮಂಡಲಿಯು ಸೆಪ್ಟೆಂಬರ್ ೧೯೭೩ರೊಳಗೆ ಒಂದು ವರದಿಯನ್ನು ಕೊಟ್ಟಿದೆ. ಅದನ್ನು ಇದುವರೆಗೆ ಜಾರಿಗೊಳಿಸದೇ ಇರುವುದಕ್ಕೆ ಕಾರಣವೇನು ?

† ಶ್ರೀ ಎಸ್. ಎಂ. ಕೃಷ್ಣ.—ಉತ್ತರದಲ್ಲಿ ಆಗಲೇ ಹೇಳಿದ್ದೇನೆ. ಆಡ್ಮಿನಿಸ್ಟ್ರೇಟಿವ್ ಸ್ಟಾಫ್ ಕಾಲೇಜಿನವರು ಮೇ ೭೧ ರಿಂದ ಸೆಪ್ಟೆಂಬರ್ ೭೩ರವರೆಗೆ ಸುಮಾರು ೯ ರಿಪೋರ್ಟ್‌ಗಳನ್ನು ಕೊಟ್ಟಿದ್ದಾರೆ. ಅವುಗಳಲ್ಲಿ ಕೆಲವು ಶಿಫಾರಸ್ಸುಗಳನ್ನು ಏನು ಮಾಡಿದ್ದಾರೆಂದರೆ, ಪ್ರೊಡೆಕ್ಷನ್ ಪ್ಲಾನಿಂಗ್ ಮತ್ತು ಕಂಟ್ರೋಲ್, ಕಾಸ್ಟಿಂಗ್ ಸಿಸ್ಟಂ. ಇತ್ಯಾದಿ. ಶಿಫಾರಸ್ಸುಗಳನ್ನು ಈಗಾಗಲೇ ಕಾರ್ಯರೂಪಕ್ಕೆ ತಂದಿದ್ದೇವೆ. ಇನ್ನು ಕೆಲವು ಶಿಫಾರಸ್ಸುಗಳು ಕಾರ್ಯಮಂಡಲಿಯವರ ತೀವ್ರ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೇನೆ.

ಶ್ರೀ ಹಂಜಿ ಶಿವಣ್ಣ.—೨೦ನೇ ಪ್ರಶ್ನೆಯ (ಅ) ಉಪಪ್ರಶ್ನೆಗೆ ೧೯೭೧ರ ಜುಲೈನಲ್ಲಿ ಎಂದು ಇದೆ. ಮತ್ತೆ (ಅ) ಪ್ರಶ್ನೆಗೆ ಉತ್ತರದಲ್ಲಿ ಪರಿಶೀಲನೆ ನಡೆಸಿಲ್ಲವೆಂದು ಇದೆ. ಇದು ಸರಿಯೇ ?

ಶ್ರೀ ಎಸ್. ಎಂ. ಕೃಷ್ಣ.—ಹೌದು ಇದರ ಬಗ್ಗೆ ಶ್ರೀ ಶಿರಾಳಿಯವರು ಪಾಯಿಂಟ್ ಔಟ್ ಮಾಡಿರಲಿಲ್ಲ. ಅದನ್ನು ಆರ್. ಸಿ. ದತ್‌ರವರು ಪರಿಶೀಲನೆ ಮಾಡಿದ್ದಾರೆ.

ಶ್ರೀ ಹಂಜಿ ಶಿವಣ್ಣ.—೨೧೦ನೇ ಪ್ರಶ್ನೆಯ (ಎಚ್) ಉಪಪ್ರಶ್ನೆಗೆ ಸ್ವಲ್ಪ ಮಟ್ಟಿಗೆ ನಿಜವೆಂದು ಹೇಳಿದ್ದೀರಿ. ಹಾಗಾದರೆ ಬಡ್ತಿ ನೇಮಕಗಳನ್ನು ಸರಿಪಡಿಸಿದ್ದೀರಾ ? ಯಾರೋ ಒಬ್ಬರನ್ನು ನೇಮಿಸಿದ್ದೀರಿ ಅವರು ಸರಿಪಡಿಸಿದ್ದಾರೆಯೇ ?

ಶ್ರೀ ಎಸ್. ಎಂ. ಕೃಷ್ಣ.—ಬಡ್ತಿ ನೇಮಕಾತಿಗಳ ವಿಷಯದಲ್ಲಿ ಕೆಲವು ಅನಾಮಲೀಸ್ ಏನು ಕಂಡುಬಂದಿದ್ದವೋ ಅವುಗಳನ್ನು ಎಲ್ಲೆಲ್ಲಿ ಸರಿಪಡಿಸಬೇಕೋ ಅಲ್ಲಲ್ಲಿ ಸರಿಪಡಿಸಲಾಗಿದೆ. ಇನ್ನೂ ಸರಿಪಡಿಸಬೇಕಾದಂಥ ವಿಚಾರಗಳು ಯಾವುವು ಉಳಿದಿವೆಯೋ ಅವುಗಳ ಬಗ್ಗೆಯೂ ಮ್ಯಾನೇಜ್‌ಮೆಂಟ್ ನವರು ತ್ವರಿತವಾಗಿ ಕ್ರಮವನ್ನು ಕೈಗೊಳ್ಳುವುದಕ್ಕೆ ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಹಂಜಿ ಶಿವಣ್ಣ.—ಸರಿಪಡಿಸಲಿಕ್ಕೆ ಯಾರು ಯಾರನ್ನು ನೇಮಿಸಿದ್ದೀರಿ ?

ಶ್ರೀ ಎಸ್. ಎಂ. ಕೃಷ್ಣ.—ಆರ್ ಸಿ. ದತ್‌ರವರು ಕೆಲವು ವಿಚಾರಗಳ ಬಗ್ಗೆ ತ್ವರಿತವಾದಂಥ ಆಳವಾದಂಥ ಪರಿಶೀಲನೆ ಆಗತ್ಯವೆಂದು ಹೇಳಿ ಏನೇನು ನಮೂದು ಮಾಡಿದ್ದಾರೆ, ಅದನ್ನು ಪರಿಶೋಧನೆ ಮಾಡುವುದಕ್ಕಾಗಿ ಒಬ್ಬ ಅಧಿಕಾರಿಯನ್ನು ಈಗಾಗಲೇ ನೇಮಕಮಾಡಿದ್ದೇವೆ ಅವರಿಗೆ ೬ ತಿಂಗಳ ಕಾಲಾವಕಾಶವನ್ನು ಕೊಟ್ಟಿದ್ದೇವೆ. ೬ ತಿಂಗಳಿನಲ್ಲಿ ಅವರು ಈ ತನಿಖೆಯ ಕೆಲಸವನ್ನು ಮುಗಿಸಿ ಸರ್ಕಾರಕ್ಕೆ ರಿಪೋರ್ಟನ್ನು ಕೊಡಬೇಕಾಗಿದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ತಾವು "ಶಿರಾಳಿಯವರು ಈ ವಿಚಾರದ ಬಗ್ಗೆ ಪರಿಶೀಲನೆ ನಡೆಸಿಲ್ಲ" ಎಂದು ಹೇಳಿದಿರಿ. ೨-೩ ವರ್ಷಗಳು ಆಲಾಗಾಯ್ತು, ಭದ್ರಾವತಿ ಅಗ್ನಿನಿ ಕಾರ್ಖಾನೆಯ ಪ್ರಕರಣ ಜನಜನಿತವಾಗಿದೆ. ಮಾತುಗಳು ನಡೆಯುತ್ತಿವೆ. ಸೀತೆ ಯಾವ ರೀತಿ ಅಗ್ನಿ ಪರೀಕ್ಷೆಗೆ ಒಳಗಾಗಿ ಯಾವ ರೀತಿ ಬಂದಳೋ ಅದೇ ರೀತಿ ಅಗ್ನಿ ಪರೀಕ್ಷೆಗೆ ಒಳಗಾಗಿ ಈ ಆಪಾದನೆಯಿಂದ ವಿಮುಕ್ತರಾಗಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.—ವಿಮುಕ್ತರಾಗುವುದಕ್ಕಾಗಿ ದತ್‌ರವರನ್ನು ನೇಮಿಸಿದ್ದೆವು. ಇನ್ನೂ ವಿಮುಕ್ತಿಯನ್ನು ಪಡೆಯಬೇಕೆಂದು ಸ್ಪೆಷಲ್ ಆಫೀಸರನ್ನು ನೇಮಕ ಮಾಡಿದ್ದೇವೆ. ಅದೂ ಪೂರ್ಣವಾದ ಮೇಲೆ ಅಗ್ನಿ ಪರೀಕ್ಷೆ ಪೂರ್ಣವಾಗುತ್ತದೆ.

ಶ್ರೀ ಅಬ್ದುಲ್ ಖಿದ್ವಾಸ್ ಅನ್ವರ್.—೨೧೦ನೇ ಪ್ರಶ್ನೆಯ (ಜಿ) ಉಪಪ್ರಶ್ನೆಗೆ ನೊ ಎಂದು ಹೇಳಿದ್ದೀರಿ. ಪರ್ಸನಲ್ ಆಫೇರ್ಸನ್ನ ಡೀಲ್ ಮಾಡಬೇಕು ಎಂದು ಶಿರಾಳಿಯವರು, ದತ್‌ರವರು ಹೇಳಿದ್ದಾರೆ. ಪರ್ಸನಲ್ ಡಿಪಾರ್ಟ್‌ಮೆಂಟಿನವರ ಕೇಸನ್ನು ಡೀಲ್ ಮಾಡದೇ, ಬೇರೆ ಜೂನಿಯರ್ಸ್‌ನ್ನು ಪ್ರಮೋಟ್ ಮಾಡಿ ಅನ್ಯಾಯವನ್ನು ನಡೆಸಿದ್ದಾರೆ. ಆದುದರಿಂದ ಇದನ್ನು ನಗಣ್ಯಮಾಡುವುದರಿಂದ ತನಿಖೆ ನಡೆಸಿ ಆ ಗ್ರೇಡ್ಸ್ ಫಿಲ್ ಅಪ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಈಗ ಎರಡು ವಿಧವಾದಂಥ ವಿಚಾರಗಳು ಉದ್ಭವವಾಗುತ್ತವೆ. ಒಂದು ಆಫೀಸರ್‌ಗಳಿಗೆ ಸಂಬಂಧಪಟ್ಟಿದ್ದು ಮತ್ತು ಅವರಿಗೆ ಪ್ರಮೋಷನ್ ಗ್ರೂಪಿಂಗ್ಸ್‌ಗೆ ಸಂಬಂಧಪಟ್ಟಿದ್ದು. ಮತ್ತೊಂದು ಮೂಲಭೂತವಾದ ಹಂಜಿ ಶಿವಣ್ಣನವರು ಕೇಳಿದ ಪ್ರಶ್ನೆ ಅಲ್ಲಿ ನಡೆದಿರತಕ್ಕ ಅವ್ಯವಹಾರಗಳ ಬಗ್ಗೆ ಈ ಎರಡನ್ನೂ ಬೇರೆ ಬೇರೆ ದೃಷ್ಟಿಯಿಂದ ವಿಚಾರ ಮಾಡಬೇಕಾಗುತ್ತದೆ. ಇದಕ್ಕೆ ಉತ್ತರ ಕೊಡಬೇಕಾಗುತ್ತದೆ. ಅಬ್ದುಲ್ ಖಿದ್ವಾಸ್ ಅನ್ವರ್ ಸಾಹೇಬರ ಮೊದಲನೆಯ ಪ್ರಶ್ನೆಗೆ ಆಫೀಸರ್ಸ್ ಅಸೋಸಿಯೇಷನ್ ಮತ್ತು ಆಫೀಸರ್ ಫೋರಂ ಎಂದು ಎರಡು ಅಂಗಗಳಿವೆ. ಅವರ ಬಗ್ಗೆ ಮ್ಯಾನೇಜ್‌ಮೆಂಟಿನವರು ಮಾತುಕತೆಯನ್ನು ನಡೆಸುತ್ತಿದ್ದಾರೆ. ಗ್ರೂಪಿಂಗ್ಸ್ ಮಾಡಬೇಕೆನ್ನುವ ಬಗ್ಗೆ, ಇವರಿಂದ ಸಲಹೆಗಳನ್ನು ಕೇಳಿದ್ದಾರೆ. ಅವರಿಂದ ಸಲಹೆಗಳು ಬಂದ ತಕ್ಷಣ ಮ್ಯಾನೇಜ್‌ಮೆಂಟ್ ಅವರ ಬಗ್ಗೆ ಯೋಗ್ಯವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಅಬ್ದುಲ್ ಖಿದ್ವಾಸ್ ಅನ್ವರ್.—ವೇಜ್ ನೆಗೋಶಿಯೇಷ್ ಕಮಿಟಿಯೊಳಗೆ ೩ ವರ್ಷಗಳಿಂದ ಚರ್ಚೆ ನಡೆಯುತ್ತಿದೆ. ದತ್ ಕಮಿಟಿಯವರು ಸಹ ಹೇಳಿದ್ದಾರೆ. ಅದನ್ನು ಫೈನಲೈಜ್ ಮಾಡಬೇಕೆಂದು, ತಾವು ಹೇಳಿದ್ದೀರಿ, ಅಡ್ಮಿನಿಸ್ಟ್ರೇಟರ್ ಯಾರನ್ನಾದರೂ ಅಪಾಯಿಂಟ್ ಮಾಡಿಬಿಟ್ಟು

(ಶ್ರೀ ಅಬ್ದುಲ್ ಖಿದ್ದೂಸ್)

ಫೈನಲೈಜ್ ಮಾಡುತ್ತೇವೆಂದು ಹೇಳಿದ್ದೀರಿ. ವರ್ಕಸ್ ಬಗ್ಗೆ ಆಫೀಸರ್ಸ್ ಬಗ್ಗೆ, ಕೆಲವರಿಗೆ ಮಾತ್ರ ಪ್ರಮೋಷನ್ ಕೊಟ್ಟು, ಡಿಸ್‌ಕಂಟೆಂಟ್‌ಮೆಂಟ್ ಕ್ರಿಯೇಟ್ ಮಾಡಿದ್ದೀರಿ, ಅದರ ಬಗ್ಗೆ ತಾವು ಯೋಗ್ಯವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎಸ್ ಎಂ. ಕೃಷ್ಣ.—ಡಿಸ್‌ಕಂಟೆಂಟ್‌ಮೆಂಟ್ ಎನ್ನತಕ್ಕಂಥದ್ದು ಮಿನಿಮಂ ಆಗಿರಬೇಕು. ಆ ರೀತಿ ಕೆಲಸಕಾರ್ಯಗಳನ್ನು ಮಾಡಿಕೊಡುತ್ತೇವೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಇದು ಸುಮಾರು ವರ್ಷಗಳಿಂದ ಈ ಸದನದಲ್ಲಿ ಚರ್ಚೆ ಆಗುತ್ತಾ ಇದೆ. ಎನ್‌ಕ್ವೈರಿ ಮಾಡುವಾಗ ಅನೇಕ ಸಂದರ್ಭಗಳಲ್ಲಿ ೨-೩ ವರ್ಷಗಳಿಂದ ಎನ್‌ಕ್ವೈರಿ ಮಾಡುತ್ತಾರೆ ಅಧಿಕಾರಿಗಳು ಅದೇ ಸ್ಥಳದಲ್ಲಿದ್ದು ಅದನ್ನು ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾ ಇರತಕ್ಕಂಥದ್ದು ತಮ್ಮ ಗಮನಕ್ಕೆ ಬಂದಿಲ್ಲವೇ ? ಹಾಗಿದ್ದರೆ ಎಷ್ಟು ಬೇಗ ಮುಗಿಸುತ್ತೀರಿ ?

ಶ್ರೀ ಎಸ್. ಎಂ. ಕೃಷ್ಣ.—೬ ತಿಂಗಳು ಡೆಡ್ ಲೈನ್ ಕೊಟ್ಟು ಫಿಕ್ಸ್ ಮಾಡಿದ್ದಾರೆ. ಸ್ಪೆಷಲ್ ಆಫೀಸರ್‌ರವರು ತಮ್ಮ ವರದಿಯನ್ನು ೬ ತಿಂಗಳೊಳಗೆ ಕೊಡಬೇಕು. ಆಲ್ಲಿ ಮೇಲಿಂದ ಮೇಲೆ ಸಾಕಷ್ಟು ಬದಲಾವಣೆಯಾಗಿದೆ. ಕೆಲವರು ರಿಟೈರ್ ಆಗಿದ್ದಾರೆ. ಕೆಲವರು ಹೊಸಬರು ಬಂದಿದ್ದಾರೆ. ಆದುದರಿಂದ ತನಿಖೆ ನಿಷ್ಪಕ್ಷಪಾತವಾಗಿ ನಡೆಯುತ್ತಿದೆ. ಯಾವ ತಕರಾರೂ ಇಲ್ಲದೆ ನಡೆಯುತ್ತಿದೆ ಎನ್ನುವ ಬಗ್ಗೆ ದತ್ ರಿಪೋರ್ಟ್‌ನಲ್ಲಿ ಸಹ ಹೇಳಿದ್ದಾರೆ. ನನಗೆ ಬೇಕಾದ ಎಲ್ಲಾ ಕಾಗದ ಪತ್ರಗಳನು ತೊಂದರೆ ಇಲ್ಲದೆ ನನ್ನ ಮುಂದೆ ಇಟ್ಟಿದ್ದಾರೆ. ಇದರ ಬಗ್ಗೆ ಮ್ಯಾನೇಜ್‌ಮೆಂಟಿನ ಕೆಲಸವನ್ನು ಶ್ಲಾಘನೆ ಮಾಡಿದ್ದಾರೆ.

ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ್.—ಸ್ವಾಮಿ, ದತ್ ಸಮಿತಿ ಕಿಬ್ಬಂದಿ ನೇಮಕ, ಬಡ್ತಿಯ ತತ್ವಗಳ ಬಗ್ಗೆ ಶಿಫಾರಸು ಮಾಡಿದೆ. ನೀವು ಒಂದು ಸರ್ಕುಲರ್‌ನ್ನೂ ಇಷ್ಯೂ ಮಾಡಿದ್ದೀರಿ. ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನಲ್ಲಿ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗಕ್ಕೆ ಎಷ್ಟೆಷ್ಟು ಕೊಡಬೇಕು ಎನ್ನುವುದನ್ನು ದತ್ ಸಮಿತಿ ವರದಿ ಮಾಡಿದೆ ಎಂದು ನನ್ನ ಭಾವನೆ ಅವರು ಮಾಡಿದೇ ಹೋಗಿದ್ದರೆ ನೀವು ಈ ಪರಿಶಿಷ್ಟವರ್ಗದವರಿಗೆ ಏನು ರಕ್ಷಣೆ ಕೊಡುತ್ತೀರಿ ?

ಶ್ರೀ ಎಸ್ ಎಂ. ಕೃಷ್ಣ.—ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗೂ ವನ್‌ಮ್ಯಾನ್ ಕಮೀಷನ್‌ಗೂ ಸಂಬಂಧವಿಲ್ಲ. ಮಾನ್ಯ ಸದಸ್ಯರು ಕೇಳಿರತಕ್ಕಂಥದ್ದು ರಾಜ್ಯಾಂಗಬದ್ಧವಾಗಿ ಗೊತ್ತು ಮಾಡಿರತಕ್ಕಂಥ ಕೆಲವು ಅಷ್ಯೂರೆನ್ಸ್‌ಸ್. ಅದನ್ನು ಈಗಾಗಲೇ ಮುಖ್ಯಮಂತ್ರಿಗಳು ಚೀಫ್ ಸೆಕ್ರೆಟರಿಯವರಿಗೆ ಈ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನಲ್ಲಿ ರಾಜ್ಯಾಂಗಬದ್ಧವಾಗಿ ಪರಿಶಿಷ್ಟ ಜನಾಂಗಕ್ಕೆ ಏನು ರಿಸರ್ವೇಷನ್ ಕೊಡಬೇಕಾಗಿತ್ತೋ ಅದು ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ಬಂದಿದೆ. ಆ ಬಗ್ಗೆ ಸರ್ವೆ ಮಾಡಬೇಕು ಎಂದು ಹೇಳಿದ್ದಾರೆ. ಮತ್ತು ಆ ಸರ್ವೆ ರಿಪೋರ್ಟ್ ಬಂದ ತಕ್ಷಣ ಎಲ್ಲೆಲ್ಲಿ ಡಿಫಿಷಿಯನ್ಸಿ ಇದೆಯೋ ಅಲ್ಲಲ್ಲಿ ಸರಿಮಾಡುವುದಕ್ಕೆ ಕೆಲವು ಕಾರ್ಯಕ್ರಮಗಳನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆ.

ಶ್ರೀ ಹಂಜೆ ಶಿವಣ್ಣ.—ಸ್ವಾಮಿ, ದತ್ ಸಮಿತಿ ರಿಪೋರ್ಟ್‌ನಲ್ಲಿ ಅಧಿಕಾರಿಗಳಿಗೆ ಭಡ್ತಿ ಕೊಡುವ ವಿಷಯದಲ್ಲಿ ಅನ್ಯಾಯವಾಗಿದೆ ಎಂದು ಬರೆದಿದ್ದಾರೆ. ಆದಷ್ಟು ಜಾಗ್ರತೆ ಆವರಿಗೆ ಭಡ್ತಿ ಕೊಡದೇ ಹೋದರೆ ಕೆಲವು ಜಾಗಗಳು ಜಿಗುಪ್ಸೆಗೊಂಡು ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಆದುದರಿಂದ ಇದನ್ನು ಬೇಗನೆ ಸರಿಪಡಿಸುತ್ತೀರಾ ?

ಶ್ರೀ ಎಸ್.ಎಂ. ಕೃಷ್ಣ.—ಅವರಿಗೆ ಜಿಗುಪ್ಸೆ ಆಗದೇ ಇರತಕ್ಕಂಥ ರೀತಿಯಲ್ಲಿ ಈ ಕಾರ್ಯ ನಡೆಯಬೇಕೆಂಬುದೇ ಸರ್ಕಾರದ ಉದ್ದೇಶ. ಧರ್ಕವತು ಕೆಲವು ಮೂಲಭೂತವಾದ ಬದಲಾವಣೆಗಳನ್ನು ಮಾಡಬೇಕು ಎಂದು ಹೇಳಿದ್ದಾರೆ ಆದರೆ ಆ ಮೂಲಭೂತವಾದ ಬದಲಾವಣೆಗಳನ್ನು ಮಾಡಬೇಕೇ ಬಿಡಬೇಕೆ ಎನ್ನುವ ಬಗ್ಗೆ ಅದು ಈಗ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಮುಂದೆ ಇದೆ. ಇದರಲ್ಲಿ ಕೇಂದ್ರ ಸರ್ಕಾರದ ಪ್ರತಿನಿಧಿಗಳೂ ಕೂಡ ಇದ್ದಾರೆ. ಆದರೆ ಇದನ್ನು ಕಾಂಪ್ರಹೆನ್ಸೀವ್‌ವ್ಯೂ ತೆಗದು ಕೊಂಡು ಮತ್ತು ಗೌರ್ನಮೆಂಟ್ ಆಫ್ ಇಂಡಿಯಾ ರೆಪ್ರೆಸೆಂಟೆಟೀವ್ಸ್ ಅವರನ್ನೂ ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು ಧರ್‌ವರ ಶಿಫಾರಸ್ಸನ್ನು ಏಮರ್ಶೆ ಮಾಡುತ್ತಿದ್ದೇವೆ.